ಓ.ಎಸ್. 82/2014

ದಿನಾಂಕಃ 17-03-2023 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

ಪಾಟೀ ಸವಾಲು : 1 ನೇ ಪ್ರತಿವಾದಿ ಪರವಾಗಿ ಶ್ರೀ. ಎಸ್.ಕೆ.ಎಸ್. ವಕೀಲರಿಂದಃ

1. ನಿಪಿ 4 ಒಪ್ಪಂದ ಪತ್ರ 1 ನೇ ಪ್ರತಿವಾದಿ ಹಾಗೂ ನನ್ನ ನಡುವೆ ಆಗಿರುತ್ತದೆ. ಸದರಿ ಪತ್ರ ಕಾರವರ ಸಿವಿಲ್ ನ್ಯಾಯಾಲಯದಲ್ಲಿ ವಕೀಲರ ಮುಖರಂತರ ಅಗಿರುತ್ತದೆ. ಒಪ್ಪಂದ ಪತ್ರದ ಮೇಲೆ ನ್ಯಾಯಾಲಯದ ಮೋಹರು ಇದೆ. ನಿಪಿ 4 ರ ಮೇಲೆ ಎಲ್ಲಿಯೂ ಸಹ ನ್ಯಾಯಾುಲಯದ ಮೋಹರು ಇಲ್ಲ ಎಂದರೆ ಸರಿಯಲ್ಲ. ನಿಪಿ 4 ರ ಮೇಲೆ ಇರುವ ಮೋಹರು ನ್ಯಾಯಾಲಯದ್ದು ಅಲ್ಲ ಎಂದರೆ ಸರಿಯಲ್ಲ. ಯಾವ ವಕೀಲರು ಮಾಡಿಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ನಿಪಿ 4 ರ ಮೇಲೆ ವಕೀಲರು ಸಹ ಸಹಿ ಮಾಡಿರುತ್ತಾರೆ. ನಿಪಿ 4 ರ ಚಾಪಾ ಕಾಗದ ಪತ್ರವನ್ನು ಯಾವ ದಿನಾಂದದಂದು ಖರೀದಿ ಮಾಡಿಲಾಗಿರುತ್ತದೆ ಎಂದೆರೆ ನನಗೆ ನೆನಪಿಲ್ಲ. ಸದರಿ ಚಾಪಾ ಕಾಗದವನ್ನು ಅಶೋಕ ರಾಣೆ ಎಂಬುವರು ತಂದಿರುತ್ತಾರೆ. ನಿಪಿ 4 ಪತ್ರವನ್ನು ಹೊರೆತುಪಡಿಸಿ ರೂ8000-00 ನಾನು ಅವರಿಗೆ ನೀಡಿರುವ ವಿಚಾರವಾಗಿ ಮತ್ತೊಂದು ಪತ್ರವನ್ನು ರೂ150-00 ಚಾಪಾ ಕಾಗದ ಮೇಲೆ ಬರೆದು ನೀಡಿರುತ್ತಾರೆ. ಸದರಿ ಪತ್ರವನ್ನು 1 ನೇ ಪ್ರತಿವಾದಿ ಹಾಗೂ ಅಶೋಕ ರಾಣೆ ರವರು ಖರೀದಿ ಮಾಡಿರುತ್ತಾರೆ. ಸದರಿ ನಿಪಿ 4 ಅದೇ ದಾಖಲೆಯಾಗಿರುತ್ತದೆ.

2. ರೂ.8000-00 ನಾನು ಅವರಿಗೆ ನೀಡಿರುವ ವಿಚಾರವಾಗಿ ಮತ್ತೊಂದು ಪತ್ರವನ್ನು ಬಿಳಿಯ ಹಾಳೆಯ ಮೇಲೆ 2012 ರಲ್ಲಿ ನಮ್ಮ ಊರು ಅವರ್ಸಾದಲ್ಲಿ, ಅಂಕೋಲಾದಲ್ಲಿ ಬರೆದು ನೀಡಿರುತ್ತಾರೆ. ದಿನಾಂಕವನ್ನು ಹೇಳಲು ಆಗುವುದಿಲ್ಲ. ಸದರಿ ಪತ್ರದಲ್ಲಿ ಸ್ಥಳ ಹಾಗೂ ದಿನಾಂಕವನ್ನು ನಮೂದಿಸಲಾಗಿದೆ. ದಾವಾ ಆಸ್ತಿಯನ್ನು ಅಶೋಕ ರಾಣೆ ರವರು ಮುಖಾಂತರ 1 ನೇ ಪ್ರತಿವಾದಿ

ನನಗೆ ಖರೀಲ ಪತ್ರ ವನ್ನು ಮಾಡಿಕೊಟ್ಟಿದ್ದು, ಅವರು ಇಬ್ಬರು ಒಟ್ಟಿಗೆ ಇರುವ ಮಾಲೀಕರಿದ್ದ ಆಧಾರದ ಮೇಲೆ ಬರೆದುಕೊಟ್ಟಿರುತ್ತಾರೆ. ನಿಪಿ 4 ರಲ್ಲಿ ಅಶೋಕ ರವರು 1 ನೇ ಪ್ರತಿವಾದಿಯ ಜ್,ಪಿ.ಎ. ಹೊಂದಿದ್ದರು ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಅಂತೆಯೆ ಅವರು ಸಹಿ ಮಾಡುವಲ್ಲಿ 1 ನೇ ಪ್ರತಿವಾದಿಯ ಜ್,ಪಿ.ಎ. ಹೊಂದಿದ್ದರು ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ.

3. ನಿಪಿ 4 ರಲ್ಲಿ ಅರಣ್ಯ ಇಲಾಖೆಯಿಂದ 336 ಮರಗಳನ್ನು ಅರಣ್ಯ ಇಲಾಖೆಯವರು ಕಡೆಯಲು ಅನುಮತಿ ನೀಡಿರುತ್ತಾರೆ ಎಂದು ನಮೂದಿಸಲಾಗಿದೆ. ನಿಪಿ 4 ಬಿ ಹಾಗೂ 5 ರಲ್ಲಿರುವ ಸಹಿಗಳಿಗೂ ವ್ಯತ್ಯಾಸವಿದೆ ಎಂದರೆ ಸರಿ. ಸದರಿ ಒಪ್ಪಂದ ಪತ್ರ ವನ್ನು ಮಾಡಿಕೊಳ್ಳುವ ಸಮಯದಲ್ಲಿ ರೂ8000–00 ಹಣವನ್ನು ನಾನು 1 ನೇ ಪ್ರತಿವಾದಿಯ ಮನೆಯಲ್ಲಿ ನೀಡಿರುತ್ತೇನೆ. ಹಣವನ್ನು ನೀಡುವಾಗ ನಾನು ಹಾಗೂ ಅವರ್ಸಾ ಗ್ರಾಮದ ಮತ್ತೊಬ್ಬ ವಕ್ತಿ ಇದ್ದರು. ಅವರ ಹೆಸರು ನನಗೆ ಗೊತ್ತಿಲ್ಲ. ನಾನು ಮಾಡಿಕೊಂಡ ಒಪ್ಪಂದ ಪತ್ರದಲ್ಲಿ ಯಾವ ಜಾತಿಯ ಎಷ್ಟು ಮರಗಳು ಇದ್ದವು ಎಂದು ನಾನು ತಿಳಿದುಕೊಂಡಿಲ್ಲ. ದಾವೆಯಲ್ಲಿ ಹಾಗೂ ಪ್ರಮಾಣ ಪತ್ರದಲ್ಲಿ ಯಾವ ಜಾತಿಯ ಎಷ್ಟು ಮರಗಳು ದಾವಾ ಸ್ವತ್ತಿನಲ್ಲಿ ಇದ್ದವು ಎಂದರೆ ಸಾಕ್ಷಿಯು ಜಂಗ್ಲಿ ಮರಗಳು ಎಂದು ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ನಿಖರವಾಗಿ ಯಾವ ಜಾತಿಯ ಎಷ್ಟು ಮರಗಳು ದಾವಾ ಸ್ವತ್ತಿನಲ್ಲಿ ಇದ್ದವು ಎಂದು ಬರೆಯಲು ಯಾವುದೆ ತೊಂದರೆ ಇರಲಿಲ್ಲ. ರೂ.8000–00 ಹಣವನ್ನು 1 ನೇ ಪ್ರತಿವಾದಿ ಅವರ್ಸಾದಲ್ಲಿ ಪಡೆದುಕೊಂಡಿರುತ್ತಾರೆ ಎಂದು ಮುಖ್ಯ ವಿಚಾರಣೆಯಲ್ಲಿ ನಮೂದಿಸಿರುತ್ತೇನೆ. ನಾನು ನೀಡಿದ ನೋಟಿಸ 1 ನೇ ಪ್ರತಿವಾದಿಗೆ ಯಾವ ದಿನಾಂಕದಂದ ತಲುಪಿರುತ್ತದೆ ಎಂದು ಹೇಳಲು ಆಗುವುದಿಲ್ಲ. ಸದರಿ ನೋಟಸನ್ನು 1 ನೇ ಪ್ರತಿವಾದಿ ಖುದ್ದಾಗಿ ಪಡೆದುಕೊಂಡಿರುತ್ತಾರೆ. ಸದರಿ ನೋಟಿಸಿನಲ್ಲ 1 ನೇ ಪ್ರತಿವಾದಿಯ ಸಹಿ ಇದೆ ಎಂದರೆ ಸರಿ. ನಿಪಿ 8 ರಲ್ಲಿರುವ ಸಹಿಯು 1 ನೇ

ಪ್ರತಿವಾದಿಯದ್ದು ಎಂದರೆ ಸರಿ. ಅದನ್ನು ನಿಪಿ 8 ಎ ಎಂದು ಗುರುತಿಸಲಾಯಿತು. ನಿಪಿ 4 ಬಿ ಹಾಗೂ 8 ಎ ವ್ಯತ್ಯಾಸವಿದೆ ಎಂದರೆ ಸರಿ. ನಿಪಿ 8 ಎ ಹಾಗೂ ನಿಪಿ 5 ರಲ್ಲಿರುವ ಸಹಿಗಳಿಗೂ ವ್ಯತ್ಯಾಸವಿದೆ ಎಂದರೆ ಸರಿ. ನಿಪಿ 8 ಎ ಹಾಗೂ ಪ್ರತಿವಾದ ಪತ್ರದಲ್ಲರುವ ಸಹಿಗಳು ಮತ್ತು 1 ನೇ ಪ್ರತಿವಾದಿಯ ವಕಾಲತ್ನಲ್ಲಿರುವ ಸಹಿಗಳು ಒಂದು ರೀತಿಯಾಗಿದೆ ಎಂದರೆ ಸರಿ.

4. 1 ನೇ ಪ್ರತಿವಾದಿಯು ಅಶೋಕ ರವರಿಗೆ ಮಾಡಿಕೊಟ್ಟ ಮುಕ್ತ ನಾಮೆಯನ್ನು ನಾ್ಯಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಮುಕ್ತನಾಮೆಯನ್ನು ಗೋವಿಂದ ನಾಯ್ಕ ರವರಿಗೆ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿ. ನನಗೆ ಈಗ ತೋರಿಸಿದ ಅಧಿಕಾರ ಪತ್ರ ಅದೇ ಅಧಿಕಾರ ಪತ್ರವಾಗಿರುತ್ತದೆ ಸದರಿ ಅಧಿಕಾರ ಪತ್ರವನ್ನು ನಿಡಿ 1 ಎಂದು ಗುರುತಿಸಲಾಯಿತು. ನಿಡಿ 1 ರಲ್ಲಿರುವ ಗೋವಿಂದ ನಾಯ್ಕ ರವರು ಸಹಿ ಯನ್ನು ನೋಡಿ ಗುರುತ್ತಿಸಿದ್ದು, ಅದನುನ ನಿಡಿ 1 ಎ ಎಂದು ಗುರುತಿಸಲಾಯಿತು. ನಿಡಿ 1 ಎ ಹಾಗೂ ನಿಪಿ 4 ಬಿ ಎರಡು ಸಹಿಗಳು ವ್ಯತ್ಯಾಸವಿದೆ ಎಂದೆರ ಸರಿ.

5. ದಾವಾ ಆಸ್ತಿ ಗಿಡ ಮತ್ತು ಮರಗಳು ಆಗಿರುತ್ತವೆ. ಸದರಿ ಗಿಡ ಮರಗಳು ಎಷ್ಟು ವಿಸ್ತೀರ್ಣ ದಲ್ಲಿ ಇದೆ ಎಂದು ವಾದ ಪತ್ರ ಹಾಗೂ ಪ್ರಮಾಣ ಪತ್ರದಲ್ಲಿ ಬರೆದಿರುತ್ತೇನೆ . ನಾನು ನೀಡಿದ ರೂ.50000-00 ಕ್ಕೆ ಸಂಬಂಧಿಸಿದಂತೆ ರಸೀದಿಯನ್ನು ಪಡೆದುಕೊಂಡಿರುವುದಿಲ್ಲ. ಸದರಿ ಹಣವನ್ನು ನ್ಯಾಯಾಲಯದಲ್ಲಿ ಗೋವಿಂದ ನಾಯ್ಕ ಹಾಗೂ ನಾರಾಯಣ ರಾಮಕೃಷ್ಣ ನಾಯ್ಕ ರವರು ಸಮಕ್ಷಮ ನೀಡಿರುತ್ತೇನೆ. ಸದರಿ ಹಣವನ್ನು 2000-00 ಹಾಗೂ 5000-00 ರೂಪಾಯಿಗಳ ನೋಟುಗಳ ಮೂಲಕ ನೀಡಿರುತ್ತೇನೆ. ಅರಣ್ಯ ಇಲಾಖೆಗೆ ಸಲ್ಲಿಸಿದ ಅರ್ಜಯ ನಕಲುಗಳನ್ನು ನ್ಯಾಯಾುಲಯಕ್ಕೆ ಹಾಜರುಪಡಿಸಿರುತೇನೆ. 2012 ಮತ್ತು 2014 ರಲ್ಲಿ ಅರಣ್ಯ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಯಾವ ದಿನಾಂಕದಂದು ನೀಡಿರುತ್ತೇನೆ ಎಂದು ನನಗೆ ನೆನಪಿಲ್ಲ. ನಂತರ

ಅರಣ್ಯ ಇಲಾಖೆಯಿಂದಲು ಸಿಬ್ಬಂದಿ ಬಂದು ಮರಗಳನ್ನು ಗುರುತಿಸಿಕೊಂಡು ಹೋಗಿರುತ್ತಾರೆ. ಯಾವ ದಿನಾಂಕದಂದು ಬಂದಿರುತ್ತಾರೆ ಎಂದು ನನಗೆ ನೆನಪಿಲ್ಲ. ಅರಣ್ಯ ಸಿಬ್ಬಂದಿಗಳು ಮರಗಳನ್ನು ಗುರುತಿಸಲು ಹಾಗೂ ಸರ್ವೆ ಮಾಡಲು ಎರಡು ಬಾರಿ ಬಂದು, ನಂತರ ದಾಖಲೆಗಳನ್ನು ಅಣಶಿ ಅರಣ ್ಯ ವಲಯಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ಅರಣ್ಯ ಸಿಬ್ಬಂದದಿಗಳು ಗಿಡಗಳನ್ನು ಗುರುತಿಸಿಕೊಂಡಿರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸುಮಾರು 336 ಮರಗಳನ್ನು ಗುರುತಿಸಿಕೊಂಡಿರುತ್ತಾರೆ. ಯಾವ ಜಾತಿಯ ಎಷ್ಟು ಮರಗಳನ್ನು ಗುರುತಿಸಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಸರ್ವೆ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ದಾಖಲೆಗಳನ್ನು ಅರ್ಜಿ ನೀಡಿ ಪಡೆದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ.

6. ಇತರೆ ಖರ್ಚುಗಳು ಸುಮಾರು ಲಕ್ಷಾಂತರ ಖರ್ಚು ,ಆಗಿರುತ್ತೆದೆ ಎಂದು ತಿಳಿಸಿದ್ದು, ಎಷ್ಟು ಖರ್ಚು ಆಗಿರುತ್ತದೆ ಎಂದು ನನಗೆ ಹೇಳಿಲು ಆಗುವುದಿಲ್ಲ. ಅರಣ್ಯ ಇಲಾಖೆಗೆ ಹಣವನ್ನು ಪಾವತಿಸಿದ್ದ ಬಗ್ಗೆ ರಸೀದಿಯನ್ನು ಹಾಜರುಪಡಿಸಿಲ್ಲ. ಅರಣ್ಯ ಇಲಾಖೆಗೆ ಯಾವುದೆ ಶುಕ್ಕವನ್ನು ತುಂಬುವುದು ಇರುವುದಿಲ್ಲ. ಮಾಲ್ಕಿ ಅರ್ಜಿ ಗಳಿಗೆ ನಿರ್ಧಿಷ್ಟ ವಾದ ಶುಕ್ಕವನ್ನು ಪಾವತಿಸಬೇಕೆಂದರೆ ಸರಿ. ನಾನು ರೂ.3,50,000-00 ಹಣವನ್ನು ತುಂಬಿರುವುದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಡಿ.ಸಿ. ಕಾರವಾರ ರವರು ದಿನಾಂಕ 06-01-2014 ರಂದು ಹೊರಡಿಸಿದ ಆದೇಶದ ಪ್ರತಿಯನ್ನು ನ್ಯಾಯಾುಲಯಕ್ಕೆ ಹಾಜರು ಪಡಿಸಿದ್ದೇನೆ. ವನ್ಯ ಜೀವಿ ಇಲಾಖೆ ದಾಂಡೇಲಿ ರವರು ನೀಡಿದ ಪತ್ರವನ್ನು ನ್ಯಾಯಾುಲಯಕ್ಕೆ ಹಾಜರು ಪಡಿಸಿದ್ದೇನೆ ನಾನು ಹಾಜರುಪಡಿಸಿದ ಎಲ್ಲಾ ದಾಖಲೆಗಳನ್ನು ನಾನು ನೋಡಿಕೊಂಡಿರುತ್ತೇನೆ. ನಾನು ಸಲ್ಲಿಸಿದ ಮಾಲ್ಕಿ ಪ್ರಕರಣವು ಯಾವ ಹಂತದಲ್ಲ ಇದೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ.

7. ವ್ಯಾಜ್ಯ ಕಾರಣವು ಏಪ್ರಿಲ್ 2014 ರಲ್ಲಿ ಉದ್ಭವವಾಗಿರುತ್ತದೆ. 1 ನೇ ಪ್ರತಿವಾದಿ ನನಗೆ ಒಪ್ಪಂದ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಯೆ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ 1 ನೇ ಪ್ರತಿವಾದಿಯ ಯಾವುದೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ಸಹಿಗಳು 1 ನೇ ಪ್ರತಿವಾದಿಯ ಸಹಿ ಅಲ್ಲ ಎಂದರೆ ಸರಿಯಲ್ಲ. ನಾನು ರೂ.50,000/- ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅಂತೆಯೆ 1 ನೇ ಪ್ರತಿವಾದಿಯು ರೂ.8,000/-ಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ ಹಾಗೂ ನಿಪಿ 5 ರಲ್ಲಿ ನಮೂದಿಸಿರುವಂತೆ 1 ನೇ ಪ್ರತಿವಾದಿಯು ರೂ.7,000/-ಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. 03-10-1997 ರಲ್ಲಿ ಮಾಡಿದ ಮಾರಾಟ ಮಾಡಿದ ಬಗ್ಗೆ ಕಾಗದ ಪತ್ರಗಳನ್ನು ಹಾಜರುಪಡಿಸಿದ್ದೇನೆ ಸದರಿ ಕಾಗದ ಪತ್ರ ನಿಪಿ 4 ಆಗಿರುತ್ತೆದೆ. ನಿಪಿ 5 ರಲ್ಲಿರುವ ಸಹಿ 1 ನೇ ಪ್ರತಿವಾದಿಯ ಸಹಿ ಅಲ್ಲ ಎಂದರೆ ಸರಿಯಲ್ಲ. ಸದರಿ ಸಹಿಯನ್ನು ನಾನೇ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ಸಲ್ಲಿಸಲು ಯಾವುದೇ ಕಾರಣ ಇಲ್ಲದೇ ಇದ್ದರೂ ಸಹ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ ಹಾಗೂ ಯಾವುದೇ ಪರಿಹಾರಕ್ಕೂ ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣಕ್ಕೆ ಅನುಕೂಲುವಾಗುವಂತೆ ಸುಳ್ಸು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : 2 ನೇ ಪ್ರತಿವಾದಿ ಪರವಾಗಿ ಶ್ರೀ. ಎಂ.ಸಿ.ಎಚ್. ವಕೀಲರಿಂದಃ

1 ನೇ ಯ ಪ್ರತಿವಾದಿಯ ಪಾಟೀ ಸವಾಲನ್ನೆ ಅನುಮೊದಿಸಿಕೊಂಡು ಮುಂದು ವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು , ಸಮಯ ನೀಡಲಾಯಿತು.

ಮರು ವಿಚಾರಣೆ ಇಲ್ಲಾಃ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ ದಂ., ದಾಂಡೇಲಿ